ಈ ದಿನ ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನಾನು ವಾದ ಪತ್ರದ ಶೀರ್ಷಿಕೆಯಲ್ಲಿ ತೋರಿಸಿದ ವಿಳಾಸದಲ್ಲಿ ಸುಮಾರು 2 ವರ್ಷಗಳಿಂದ ವಾಸವಾಗಿರುತ್ತೆನೆ. ಸದರಿ ವಿಳಾಸದಲ್ಲಿ ವಾಸವಿರುವ ಮುನ್ನ ನಾನು ಶಕ್ತಿ ಗ್ಯಾಸ್ ಡೌನ್ ನ ಹತ್ತಿರದ ಮನೆಯಲ್ಲಿ ಬಾಡಿಗೆ ಮನೆಯಲ್ಲಿ 9 ವರ್ಷ ವಾಸವಿದ್ದೆನು, ಅದಕ್ಕೂ ಮುಂಚೆ ಮೌನೇಶ್ವರ ಬಡಾವಣೆಯ ಬೃಂದಾವನ ನಿಲಯದಲ್ಲಿ 2 ವರ್ಷ ವಾಸವಿದ್ದೆನು. ಅದಕ್ಕೂ ಮುನ್ನ ನಿಟುವಳ್ಳಿಯ ದುರ್ಗಾಂಬಿಕ ಹಿಟ್ಟಿನ ಗಿರಣಿಯ ಬಳಿ ಬಾಡಿಗೆ ಮನೆಯಲ್ಲಿ ವಾಸವಿದ್ದೆ. ನಾನು ದಾವಣಗೆರೆಯಲ್ಲಿ ಸುಮಾರು 25 ವಷಗಳಿಂದ ವಾಸವಿದ್ದೆನೆ ಎಂದರೆ ಸರಿ. ನನ್ನ ಗಂಡ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿಯವರು ತಮ್ಮ ಸೇವಾ ಅವಧಿಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನಗೆ ಒಬ್ಬಳು ಮಗಳು ಇದ್ದು ಆಕೆ ಬಿ ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದು ಅರೆಕಾಲಿಕ ಉದ್ಯೋಗವನ್ನು ಸಹ ಮಾಡುತ್ತಿದ್ದಾಳೆ. ಹಾಗಾಗಿ ಸುಮಾರು 22 ವರ್ಷಗಳಿಂದ ದಾವಣಗೆರೆಯನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಸಹ ನಾವು ವಾಸವಾಗಿಲ್ಲ ಎಂದರೆ ಸರಿ.

ನನ್ನ ಗಂಡನ ಜೀವಿತಾವಧಿಯಲ್ಲಿ ನಾನು, ನನ್ನ ಗಂಡ, ರಾಘವೇಂದ್ರಪ್ಪ ಮತ್ತು ಅತನ ಹೆಂಡತಿಯಾದ ಶಾಂತಮ್ಮ 4 ಜನರೂ ಸೇರಿ ಬೇರೆ ಬೇರೆ ಆಸ್ತಿಗಳನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ವಿಚಾರವಾಗಿ ಚನ್ನಗಿರಿ ನ್ಯಾಯಾಲಯಗಳಲ್ಲಿ ನಮ್ಮ ವಿರುದ್ದ ಹಲವು ದಾವೆಗಳು ನಡೆಯುತ್ತಿವೆ ಎಂದರೆ ಸರಿ.

ನನ್ನ ಗಂಡ ಭೀಷ್ಮಾಚಾರನಿಗೆ 3 ಜನ ಸಹೋದರರು ಎಂದರೆ ಸರಿ. ಅವರೆಂದರೆ ಸಿದ್ದಾಚಾರ್ , ತೀರ್ಥಚಾರ್ ಮತ್ತು ರವೀಂದ್ರಚಾರ್ ಎಂದರೆ ಸರಿ. ಅವರಲ್ಲಿ ತೀರ್ಥಚಾರ್ ಮತ್ತು ರವೀಂದ್ರಚಾರ್ ರವರು ಕಗತೂರು ಗ್ರಾಮದಲ್ಲಿ ವಾಸವಿದ್ದಾರೆ

ಎಂದರೆ ಸರಿ. ನನ್ನ ಗಂಡ ದಾವಣಗೆರೆಯಲ್ಲಿ ಮತ್ತು ಸಿದ್ದಾಚಾರ್ ರವರು ಶಿವಮೊಗ್ಗದಲ್ಲಿ ವಾಸವಿದ್ದಾರೆ ಎಂದರೆ ಸರಿ.

ನನ್ನ ಮಾವ ನಾಗೇಂದ್ರಚಾರ್ ರವರು ಸುಮಾರು 15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಅದಕ್ಕೂ ಮುನ್ನ ನನ್ನ ಮಾವ ಮತ್ತು ಅವರ ಮಕ್ಕಳು ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿ. ನನ್ನ ಗಂಡನ ಮನೆಯ ಒಟ್ಟು ಕುಟುಂಬದ ಯಜಮಾನಿಕೆಯನ್ನು ನನ್ನ ಮಾವನವರೇ ಮಾಡುತ್ತಿದ್ದರು. ನನ್ನ ಮಾವ ತಮ್ಮ ಜೀವಿತಾವಧಿಯಲ್ಲಿ ಮನೆ ಮತ್ತು ಜಮೀನು ಆಸ್ತಿಗಳನ್ನು ಹೊಂದಿದ್ದರು. ಜಮೀನು ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಮಾವ ಅವರ ಮಕ್ಕಳ ನಡುವೆ 2001ರಲ್ಲಿ ವಿಭಾಗಪತ್ರ ಆಗಿರುತ್ತದೆ. ಸದರಿ 2001 ನೇ ಸಾಲಿನಲ್ಲಿ ನಿಪಿ-1 ರಂತೆ ವಿಭಾಗವಾಗುವ ಸಮಯಕ್ಕೆ ನಾನು ನನ್ನ ಗಂಡನೊಂದಿಗೆ ದಾವಣಗೆರೆಯಲ್ಲಿ ವಾಸವಿದ್ದೆವು ಎಂದರೆ ಸರಿ. ನಿಪಿ-1 ರ ಸಮಯಕ್ಕೆ ನಾನು ಖುದ್ದಾಗಿ ಹಾಜರಿರಲಿಲ್ಲ.

(ಸದರಿ ಸಮಯಕ್ಕೆ ವಾದಿ ಪರ ವಕೀಲರು ಸಾಕ್ಷಿ ಹೇಳಿದ್ದನ್ನೆಲ್ಲ ನ್ಯಾಯಾಲಯ ಸಾಕ್ಷ್ಯವಾಗಿ ನಮೂದಿಸಬೇಕಾಗಿ ಕೋರಿರುತ್ತಾರೆ. ಅದರೆ ಸದರಿ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ನಿಖರವಾಗಿ ನಿಪಿ-1ರ ಸಮಯಕ್ಕೆ ಸಾಕ್ಷಿ ಹಾಜರಿದ್ದರೇ ಎಂಬ ಪ್ರಶ್ನೆಯನ್ನು ಸೂಚಿಸಿದ್ದು, ಸದರಿ ಪ್ರಶ್ನೆಗೆ ಸಾಕ್ಷಿ ತಾನು ಹಾಜರಿರಲಿಲ್ಲವೆಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ ಹಾಗಾಗಿ ವಾದಿ ಪರ ವಕೀಲರ ತಕರಾರನ್ನು ತಳ್ಳಿಹಾಕಲಾಯಿತು.).

ನಿಪಿ-1 ರಂತೆ ನನ್ನ ಗಂಡನ ಹಿಸ್ಸೆಗೆ ಅರ್ಧ ಎಕರೆ ಜಮೀನು ಬಂದಿರುತ್ತದೆ. ಸದರಿ ಆಸ್ತಿಯ ಸರ್ವೆ ನಂ , ವಿಸ್ತೀರ್ಣ , ಚೆಕ್ಕಬಂದಿ ನನಗೆ ಹೇಳಲಾಗುವುದಿಲ್ಲ, ಅದೇ ರೀತಿ ತೀರ್ಥಚಾರ್ ಅವರಿಗೆ ಎಷ್ಟು ಜಮೀನು ಬಂದಿತ್ತು ಎಂದರೆ ಸಾಕ್ಷಿ ನನ್ನ ಮಾವನ ಎಲ್ಲಾ ಮಕ್ಕಳಿಗೂ ಸಹ ಅರ್ಧರ್ಧ ಎಕರೆ ಜಮೀನು ಬಂದಿರುತ್ತದೆ. ಸದರಿ ಜಮೀನುಗಳ ಸರ್ವೆ ನಂಬರು ನನಗೆ ಹೇಳಲಾಗುವುದಿಲ್ಲ. ನಾನು ಸದರಿ ಪಾಲುವಿಭಾಗಪತ್ರವನ್ನು ನ್ಯಾಯಾಲಯಕ್ಕೆ ನಿಪಿ-1 ರಂತೆ ಹಾಜರುಪಡಿಸಿರುತ್ತೇನೆ. ಸದರಿ ನಿಪಿ-1 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವ ಸದರಿ ದಾಖಲೆ ನನ್ನ ಬಳಿಯೇ ಇತ್ತು

ಎಂದರೆ ಸರಿ. ಹಾಗಾಗಿ ಸದರಿ ದಾಖಲೆಯಲ್ಲಿ ಬರೆದ ಸಂಗತಿಗಳ ಕುರಿತು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ 4 ಜನ ಗಂಡು ಮಕ್ಕಳು ತಮ್ಮ ಪಾಲಿನ ಆಸ್ತಿಯನ್ನು ತಮ್ಮ ತಾಯಿಯಾದ ನಾಗರತ್ನಮ್ಮನವರಿಗೆ ಬಿಟ್ಟುಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ನನ್ನ ಅತ್ತೆಯನ್ನು ಯಾರು ನೋಡಿಕೊಳ್ಳುತ್ತಾರೋ ಅವರೇ ನೋಡಿಕೊಳ್ಳಬೇಕಾಗಿ ಮಾತುಕತೆಯಾಗಿರುತ್ತದೆಂದು ನುಡಿಯುತ್ತಾರೆ. ಹಾಗಾದರೆ ನನ್ನ ಗಂಡನಿಗೆ ಬಂದಂತಹ ಎಲ್ಲಾ ಆಸ್ತಿಗಳನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ನಿಪಿ-1 ರಲ್ಲಿ ನನ್ನ ಗಂಡನ ಒಟ್ಟು ಕುಟುಂಬಕ್ಕೆ ಸೇರಿದ ಮನೆ ಮತ್ತು ನಿವೇಶನಗಳನ್ನು ಹೊರತುಪಡಿಸಿ ಕೇವಲ ಜಮೀನುಗಳನ್ನು ಮಾತ್ರ ಪಾಲುವಿಭಾಗ ಮಾಡಿಕೊಂಡಿರುವ ಕುರಿತು ಒಕ್ಕಣಿಕೆ ಇದೆಯೇ ಎಂದರೆ (ಸದರಿ ಸಮಯಕ್ಕೆ ವಾದಿ ಪರ ವಕಿಲರು ಸಾಕ್ಷಿಗೆ ನಿಪಿ-1 ನ್ನು ಕೊಟ್ಟು ಅದನ್ನು ಓದಿ ಉತ್ತರಿಸುವಂತೆ ಸೂಚಿಸಿರುತ್ತಾರೆ). (ಸದರಿ ಸಮಯಕ್ಕೆ ವಾದಿ ಪರ ವಕಿಲರು 4-5 ಬಾರಿ ಸದರಿ ಪ್ರಶ್ನೆಯನ್ನು ಒತ್ತು ಕೊಟ್ಟು ಸಾಕ್ಷಿಗೆ ಸಹಾಯ ಮಾಡಲು ಮುಂದಾಗಿರುತ್ತಾರೆ.) ಸದರಿ ಸಮಯ್ಕೆ ಸದರಿ ಪ್ರಶ್ನೆಯನ್ನು ಪ್ರತಿವಾದಿ ಪರ ವಕೀಲರು ಪುನಃ ಕೇಳಿದ್ದು ಪುನಃ ನಿಪಿ-1 ನ್ನು ಓದಬೇಕು ಎಂದು ಉತ್ತರಿಸಿ ನಿಪಿ-1 ನ್ನು ಓದಿರುತ್ತಾರೆ. ನಂತರ ಸದರಿ ನಿಪಿ-1 ರಲ್ಲಿ ಸದರಿ ಒಕ್ಕಣಿಕೆ ಇಲ್ಲ ಎಂದು ನುಡಿದಿರುತ್ತಾರೆ.

ನನ್ನಗಂಡ ಈ ದಾವೆಯನ್ನು 2019 ರಲ್ಲಿ ಹೂಡಿದ್ದು ಸದರಿ ಸಮಯಕ್ಕೂ ಸಹ ದಾವಣಗೆರೆಯಲ್ಲಿ ಖಾಯಂ ಆಗಿ ವಾಸವಾಗಿದ್ದರು ಎಂದರೆ ಸರಿ. ನಾನಾಗಲಿ ನನ್ನ ಗಂಡನಾಗಲಿ ಅಥವಾ ನನ್ನ ಮಗಳಾಗಲಿ ಕಗತೂರು ಗ್ರಾಮದಲ್ಲಿ ಖಾಯಂ ಆಗಿ ವಾಸವಿದ್ದ ಕುರಿತು ಯಾವುದೇ ಅಧಿಕೃತ ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ಹಬ್ಬಗಳಿಗೆ ಹೋಗಿ ಇದ್ದು ಬರುತ್ತಿದ್ದೆವು ಎಂದು ನುಡಿಯುತ್ತಾರೆ. ಸರಿದ ಹಬ್ಬಳಿಗೆ ಹೋದಾಗ ಯಾರ ಮನೆಯಲ್ಲಿ ಇರುತ್ತಿದ್ದಿರಿ ಎಂದರೆ ಸಾಕ್ಷಿ ನಮ್ಮ ಪಾಲಿಗೆ ಬಂದ ಮನೆಯಲ್ಲಿ ಹೋಗಿ ವಾಸಿಸುತ್ತಿದ್ದೆವು ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಕಗತೂರಿಗೆ ಹೋಗುವುದನ್ನು ನಿಲ್ಲಿಸಿದ್ದೀರ ಎಂದರೆ ಸಾಕ್ಷಿ ನನ್ನ ಗಂಡ ಮೃತಪಟ್ಟ ತರುವಾಯ ಬೇಜಾರಿನಿಂದ 6 ತಿಂಗಳಿನಿಂದ

ಹೋಗಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯ ಕುರಿತು ನನ್ನ ಗಂಡನ ಹೆಸರಿಗೆ ಹಕ್ಕು ಸ್ಥಾಪಿಸಲು ಯಾವುದಾದರೂ ನೊಂದಾಯಿತ ದಾಖಲೆ ಇದೆಯೇ ಎಂದರೆ ಸಾಕ್ಷಿ ಪಾಲುಪತ್ರವಿದೆ ಎಂದು ನುಡಿಯುತ್ತಾರೆ. ಸದರಿ ಪಾಲುಪತ್ರ ನೊಂದಣಿಯಾಗಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆ ಒದಗಿಸಿದ್ದಿರ ಎಂದರೆ ಸಾಕ್ಷಿ ಕೊಟ್ಟಿರುತ್ತೇವೆ ಎಂದು ನುಡಿಯತ್ತಾರೆ, ದಾವಾಸ್ತಿಯ ಮೇಲೆ ಯಾವುದೇ ನೊಂದಾಯಿತ ಪತ್ರ ನನ್ನ ಹೆಸರಿಗಾಗಲಿ ಅಥವಾ ನನ್ನ ಗಂಡನ ಹೆಸರಿಗಾಗಲಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿನ ಮನೆಯನ್ನು 2015ರಲ್ಲಿ ಕಟ್ಟಿರುತ್ತಾರೆ. ಸದರಿ ಮನೆಕಟ್ಟಲು ಪರವಾನಿಗೆಯನ್ನು ಪಡೆದಿರುತ್ತೇವೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿದಿದ್ದು ಸಾಕ್ಷಿಗೆ ತನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳ ಪಟ್ಟಿಯಲ್ಲಿ ತಾನು ಹೇಳಿದಂತಹ ಯಾವುದೇ ಪರವಾನಿಗೆ ದಾಖಲೆ ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

ದಾವಾಸ್ತಿಯಲ್ಲಿ 2015ರಲ್ಲಿ ಮನೆಯನ್ನು ಕಟ್ಟಲು ಸುಮಾರು 15-16 ಲಕ್ಷ ಖರ್ಚಾಗಿರುತ್ತದೆ. 2019 ರಲ್ಲಿ ಪ್ರಸ್ತುತ ದಾವೆಯನ್ನು ಹೂಡುವ ಸಮಯಕ್ಕೆ ದಾವಾಸ್ತಿಯ ಮನೆಯ ಬೆಲೆ ಸುಮಾರು 20 ಲಕ್ಷ ಇತ್ತು ಎಂದರೆ ಸರಿ. ದಾವಾಸ್ತಿಯಲ್ಲಿ ಮನೆಯನ್ನು ಕಟ್ಟಿಸಿದ ಕುರಿತು ಯಾವುದೇ ದಾಖಲೆ ನನ್ನ ಬಳಿ ಇಲ್ಲ ಎಂದರೆ ಸಾಕ್ಷಿ ಮನೆಯೇ ಇದೆ ಎಂದು ನುಡಿಯುತ್ತಾರೆ.

(ಸದರಿ ಸಮಯಕ್ಕೆ ಪ್ರತಿವಾದಿ ಪರ ವಕೀಲರು ದಿಃ 27-08-2001ರ ನೊಂದಾಯಿತವಲ್ಲದ ಜುಬಾನಿ ವಿಭಾಗ ಪತ್ರದ ಮೇಲೆ Duty and Penalty ಯನ್ನು ಪಾವತಿಸಿದ ಕುರಿತು ನ್ಯಾಯಾಲಯದ ಗಮನವನ್ನು ತೆಗೆದಕೊಂಡು ಹೋಗಿದ್ದು ಸದರಿ ಸಮಯಕ್ಕೆ ನ್ಯಾಯಾಲಯ ಆದೇಶ ಪುಟ ಮತ್ತು ಸದರಿ ದಾಖಲೆಯ ಮೇಲೆ ದಂಡ ಶುಲ್ಕವನ್ನು ಪಾವತಿಸಿದ ಕುರಿತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ಸಮಯಕ್ಕೆ 20-08-2025 ರಂದು ಜಿಲ್ಲಾ ನೊಂದಾಣಾಧಿಕಾರಿಗಳು

ದಾವಣಗೆರೆಯವರು ಸಲ್ಲಿಸಿದ ಪತ್ರವನ್ನು ಪರಿಶೀಲಿಸಿದಾಗ ಸದರಿ ಪತ್ರದಲ್ಲಿ ನಮೂದಿಸಿರುವಂತೆ ದಿಃ 27-08-2001ರಂದು ಆದ ಪಾಲುವಿಭಾಗಪತ್ರ ಈಗಾಗಲೇ ನೊಂದಾಣಿಯಾಗಿದೆ ಎಂದು ಉಲ್ಲೇಖಿಸಿದ್ದು ಮತ್ತು ನೊಂದಣಿ ದೃಢೀಕರಣ ಮಾಡಿರುತ್ತಾರೆ ಎಂದು ಪತ್ರವನ್ನು ರವಾನಿಸಿರುತ್ತಾರೆ. ಸದರಿ ಸಮಯಕ್ಕೆ ನ್ಯಾಯಾಲಯ ವಾದಿ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳನ್ನು ಪರಿಶೀಲಿಸಿದಾಗ ದಿಃ 27-08-2001 ನೇ ಸಾಲಿನ ಜುಬಾನಿ ವಿಭಾಗಪತ್ರ ನೊಂದಣಿ ಆಗಿಲ್ಲದಿರುವುದನ್ನು ಮತ್ತು ಸದರಿ ಪತ್ರವನ್ನು 20 ರೂ,ಗಳ ಸ್ಟ್ಯಾಂಪ್ ಮೇಲೆ ಬರೆದಿರುವುದನ್ನು ಗಮನಿಸಿದ್ದು ಸದರಿ ದಾಖಲೆಯನ್ನು ಮುದ್ರಾಂಕ ಶುಲ್ಕ ಮತ್ತು ದಂಡ ಶುಲ್ಕದ ಪಾವತಿಗಾಗಿ ನೊಂದಾಣಿ ಮತ್ತು ಮುದ್ರಾಂಕ ಇಲಾಖೆಗೆ ರವಾನಿಸುವಂತೆ ದಿಃ 31-07-2025 ರಂದು ಕಚೇರಿಗೆ ಆದೇಶಿಸುತ್ತದೆ. ಆದರೆ ಕಚೇರಿಯು ಜುಬಾನಿ ಹಿಸ್ಸೆ ಪತ್ರವನು ಮುದ್ರಾಂಕ ಇಲಾಖೆಗೆ ಕಳುಹಿಸುವ ಬದಲು ಅದೇ ದಿನಾಂಕದಂದು ಆಗಿರುವನೊಂದಾಯಿತ ಪಾಲುವಿಭಾಗ ಪಾರಿಕತ್ತು ಯಾನೇ ವಿಭಾಗಪತ್ರವನ್ನು ಮುದ್ರಾಂಕ ಇಲಾಖೆಗೆ ಕಳುಹಿಸಿರುವುದನ್ನು ಗಮನಿಸಿ ಸದರಿ ನೊಂದಣಿಯಾಗದ ಜುಬಾನಿ ಹಿಸ್ಸೆ ಪತ್ರವನ್ನು ದಂಡಪಾವತಿಗಾಗಿ ಮುದ್ರಾಂಕ ಶುಲ್ಕ ಮತ್ತು ದಂಡ ಪಾವತಿಗಾಗಿ ಜಿಲ್ಲಾನೊಂದಾಣಾಧಿಕಾರಿ ಕಚೇರಿಗೆ ಕಳುಹಿಸುವಂತೆ ಆದೇಶಿಸಿದೆ). ಸದರಿ ಸಮಯಕ್ಕೆ ವಾದಿ ಪರ ವಕೀಲರು ಸಹ ಸದರಿ ಮುದ್ರಾಂಕ ಶುಲ್ಕ ಮತ್ತು ದಂಡ ಶುಲ್ಕದ ಪಾವತಿಸಲು ಸಿದ್ದರಿರುವುದಾಗಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

OS 54/2019
PW- 2

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.